ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 551

ಸದಸ್ಯರ ಹೆಸರು : ಡಾ. ವೈ.ಎ. ನಾರಾಯಣ ಸ್ವಾಮಿ (ಶಿಕ್ಷಕರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 16-09-2021

ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ

ಪ್ರಶ್ನೆ	ಉತ್ತರ
(ಅ) ಕೋವಿಡ್-19ರ ಸಂದರ್ಭದಲ್ಲಿ ಸಂಕಷ್ಟಕ್ಕೆ ಒಳಗಾಗಿರುವ ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರಿಗೆ ವಿಶೇಷವಾದ ಪ್ಯಾಕೇಜ್‌ನ್ನು ಘೋಷಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು ಬಂದಿದೆ.
(ಆ) ಬಂದಿದಲ್ಲಿ ವಿವರಗಳನ್ನು ನೀಡುವುದು;	ಸರ್ಕಾರದ ಆದೇಶ ಸಂಖ್ಯೆ: ಇಪಿ 39 ಯೋಯೋಕ 2021, ದಿನಾಂಕ:02.07.2021 ರಂತೆ ರಾಜ್ಯದ ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 1,72,945 ಶಿಕ್ಷಕರು ಹಾಗೂ 34,000 ಬೋಧಕೇತರ ಸಿಬ್ಬಂದಿಗಳಿಗೆ ತಲಾ ರೂ.5000 ರಂತೆ ಕೋವಿಡ್-19 ವಿಶೇಷ ಪ್ಯಾಕೇಜ್ ಪರಿಹಾರ ಧನವನ್ನು ಒದಗಿಸಲಾಗಿದೆ.
(ಇ) ಈ ಪ್ಯಾಕೇಜ್‌ನ್ನು ಎಂದಿನಿಂದ ಜಾರಿಗೆ ತರಲಾಗಿದೆ; ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ಎಷ್ಟು ಫಲಾನುಭವಿಗಳ ಬ್ಯಾಂಕ್ ಖಾತೆಗೆ ಹಣವನ್ನು ಜಮಾ ಮಾಡಲಾಗಿದೆ; (ವಿವರಗಳನ್ನು ತಾಲ್ಲೂಕುವಾರು/ಜಿಲ್ಲಾವಾರು ನೀಡುವುದು)	ಈ ಪ್ಯಾಕೇಜ್‌ನ್ನು 2021-22ನೇ ಸಾಲಿಗೆ ಜಾರಿಗೆ ತರಲಾಗಿದ್ದು, ಒಟ್ಟಾರೆಯಾಗಿ ರೂ.10347.25 ಲಕ್ಷಗಳ ಅನುದಾನ ಒದಗಿಸಲಾಗಿದೆ. ಇಲ್ಲಿಯವರೆಗೆ ರಾಜ್ಯದ ಅನುದಾನರಹಿತ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 90790 ಶಿಕ್ಷಕರು ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ತಲಾ 5 ಸಾವಿರ ರೂಪಾಯಿಗಳಂತೆ ಒಟ್ಟಾರೆಯಾಗಿ ರೂ.4539.50 ಲಕ್ಷಗಳ ಅನುದಾನವನ್ನು ಕೋವಿಡ್-19 ವಿಶೇಷ ಪ್ಯಾಕೇಜ್ ಪರಿಹಾರ

	ಧನವಾಗಿ ಬಿಡುಗಡೆಗೊಳಿಸಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ಒದಗಿಸಿದೆ. ಬ್ಯಾಂಕ್ ಖಾತೆಯನ್ನು ಆಧಾರ್ ಸಂಖ್ಯೆಯೊಂದಿಗೆ ಸಂಯೋಜನೆಗೊಳಿಸದ ಉಳಿಕೆ ಶಿಕ್ಷಕರ ಹಾಗೂ ಬೋಧಕೇತರ ಸಿಬ್ಬಂದಿಗಳಿಂದ ಮಾಹಿತಿ ಪಡೆದು ಕೋವಿಡ್-19 ವಿಶೇಷ ಪ್ಯಾಕೇಜ್ ಪರಿಹಾರ ಧನವನ್ನು ಒದಗಿಸಲು ಕ್ರಮವಹಿಸಲಾಗಿದೆ.
(ಈ) ಈಗ ಘೋಷಣೆ ಮಾಡಿರುವ ರೂ. 5 ಸಾವಿರ ಜೊತೆಗೆ ಇನ್ನೂ ರೂ. 5 ಸಾವಿರಗಳನ್ನು ಬೇಡಿಕೆಗಾಗಿ ನೌಕರರು/ಜನಪ್ರತಿನಿಧಿಗಳು ಸರ್ಕಾರಕ್ಕೆ ಬೇಡಿಕೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಮುಂದಿನ ರೂ. 5 ಸಾವಿರ ಕಂತನ್ನು ಎಷ್ಟು ಅವಧಿಯೊಳಗೆ ಬಿಡುಗಡೆ ಮಾಡಲಾಗುವುದು?	ಬಂದಿದೆ. ಸರ್ಕಾರ ರೂ.5,000 ಗಳನ್ನು ಮಾತ್ರ ನಿಗದಿಪಡಿಸಿದೆ. ಅನ್ವಯಿಸುವುದಿಲ್ಲ.

ಇಪಿ 93 ಯೋಯೋಕ 2021

(ಬಿ.ಸಿ. ನಾಗೇಶ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
ಸಕಾಲ ಸಚಿವರು

ಅನುಬಂಧ-1

District wise Teaching and Non Teaching staff Covid 19 package amount Paid (Rs.5000)

Sl.No.	District	Teaching Staff Already Paid	Non Teaching Staff Already Paid	Total
1	BAGALKOT-2902	1535	670	2205
2	BALLARI-2912	2833	656	3489
3	BELAGAVI CHIKKODI-2930	2256	604	2860
4	BELAGAVI-2901	1602	604	2206
5	BENGALURU RURAL-2921	1390	581	1971
6	BENGALURU U NORTH-2928	6838	1373	8211
7	BENGALURU U SOUTH-2920	10790	3433	14223
8	BIDAR-2905	350	17	367
9	CHAMARAJANAGARA-2927	686	280	966
10	CHIKKABALLAPURA-2929	1252	873	2125
11	CHIKKAMANGALURU-2917	370	134	504
12	CHITRADURGA-2913	849	774	1623
13	DAKSHINA KANNADA-2924	2718	2236	4954
14	DAVANAGERE-2914	2452	718	3170
15	DHARWAD-2909	2516	589	3105
16	GADAG-2908	973	259	1232
17	HASSAN-2923	1225	818	2043
18	HAVERI-2911	1154	326	1480
19	KALBURGI-2904	2124	392	2516
20	KODAGU-2925	456	590	1046
21	KOLAR-2919	1608	715	2323
22	KOPPAL-2907	1235	389	1624
23	MANDYA-2922	1917	779	2696
24	MYSURU-2926	4704	1388	6092
25	RAICHUR-2906	1728	663	2391
26	RAMANAGARA-2932	1202	801	2003
27	SHIVAMOGGA-2915	1420	940	2360
28	TUMAKURU MADHUGIRI-2931	1032	342	1374
29	TUMAKURU-2918	2153	796	2949
30	UDUPI-2916	1396	959	2355
31	UTTARA KANNADA SIRSI-2934	242	180	422
32	UTTARA KANNADA-2910	894	180	1074
33	VIJAYAPURA-2903	1873	243	2116
34	YADAGIRI-2933	679	36	715
Total		**66452**	**24338**	**90790**